ಜಿಲ್ಲಾ ಪಂಚಾಯಿತಿ ಬೆಂಗಳೂರು ನಗರ

ತಾಲ್ಲೂಕು ಪಂಚಾಯಿತಿ ಆನೇಕಲ್

ಗ್ರಾಮ ಪಂಚಾಯಿತಿ ಕಾರ್ಯಾಲಯ ಮುಗಳೂರು

Email:mugulurugp@rediffmail.com

ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 562125

ದಿನಾಂಕ: 27.02.2024

ಒಪ್ಪಗೆ ಪತ್ರ

ರವರಿಗೆ,

ತತ್ವಂ ಯುನೈಟೆಡ್,
ನಂ: 9/2/1, ಮದ್ರಾಸ್ ಬ್ಯಾಂಕ್ ರೋಡ್,
ಬೆಂಗಳೂರು 560001

ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಮುಗಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುಗಳೂರು ಗ್ರಾಮದ ಸರ್ವೆ ನಂ:157/1 ರಲ್ಲಿ 8–8.08 (ಎಕರೆ–ಗುಂಟೆ) ಪ್ರದೇಶವನ್ನು ಮಾನ್ಯ ಜಿಲ್ಲಾಧಿಕಾರಿಗಳಿಂದ ವ್ಯವಸಾಯೇತರ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿ ನಂತರ STRR ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆದಿದ್ದು ಪ್ರಸ್ತುತ ಜಮೀನಿಗೆ ಅಭಿವೃದ್ದಿಗೆ ಸಂಬಂಧಿಸದಂತೆ ಅರ್ಜಿದಾರರು ಮೂಲ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಿದ ನಂತರ ಗ್ರಾಮ ಪಂಚಾಯಿತಿ ನಿರ್ಮಾನಕ್ಕೆ ಒಪ್ಪಗೆ ನೀಡಿ ನಿಯಮಾನುಸಾರ ಅಗತ್ಯ ಶುಲ್ಕವನ್ನು ಪಾವತಿಸಿ ಮೂಲ ಸೌಕರ್ಯಗಳನ್ನು ಅಭಿವೃದ್ದಿ ಪಡಿಸಿದಲ್ಲಿ ಕುಡಿಯುವ ನೀರು ಸರಬರಾಜು ಮಾಡಲು ಸೇರಿದಂತೆ ಮೂಲ ಸೌಕರ್ಯಗಳನ್ನು ನಿರ್ವಹಣೆ ಮಾಡಲು ಗ್ರಾಮ ಪಂಚಾಯಿತಿಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಈ ಕೆಳಕಂಡ ಷರತ್ತಿಗೆ ಒಳಪಟ್ಟು ಈ ಮೂಲಕ ತಿಳಿಸಲಾಗಿದೆ.

ಈ ಮೇಲ್ಕಂಡ ಜಮೀನು ಬಗ್ಗೆ ಯಾವುದೇ ತಂಟೆ ತಕರಾರುಗಳು ಹಾಗೂ ವ್ಯಾಜ್ಯಗಳಿದ್ದಲ್ಲಿ ಗ್ರಾಮ ಪಂಚಾಯಿತಿಯು ಜವಾಬ್ದಾರರಲ್ಲ, ಮಾಲೀಕರೇ ಹೊಣೆಗಾರರಾಗಿರುತ್ತಾರೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಮುಗಳೂರು ಗ್ರಾಮ ಪಂಚಾಯಿತಿ
ಸರ್ಜಾಪುರ ಹೋಬಳಿ
ಆನೇಕಲ್ ತಾಲ್ಲೂಕು